ಖಂಡಿತವಾಗಿ ಸರ್ಕಾರ ತೆಗೆದುಕೊಳ್ಳುತ್ತದೆ, ಅಲ್ಲಿ ಅವ್ಯವಹಾರವಾಗಿದ್ದರೆ ಅದಕ್ಕೆ ಅವಕಾಶ ಕೊಡುವುದಿಲ್ಲವೆಂಬ ವಿಷಯವನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು : ಶ್ರೀನಿವಾಸ ಎಂ. ಅವರು ಇಲ್ಲ. ಮಂಜುನಾಥ್ ಹೆಚ್.ಪಿ. ಅವರು ತಮ್ಮ ಪ್ರಶ್ನೆಯನ್ನು ಕೇಳುವುದು.

ಪ್ರಶ್ನೆ ಸಂಖ್ಯೆ 28 (94)

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ರಾಜ್ಯದಲ್ಲಿ ನಡೆಯುವ ಅನಧಿಕೃತ ಗಣಿಗಾರಿಕೆಯ ಬಗ್ಗೆ

29 (101) ಶ್ರೀ ಹೆಚ್.ಪಿ. ಮಂಜುನಾಥ್: (ಹುಣಸೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವುದೇ ರೀತಿಯ ಗಣಿಗಾರಿಕೆ ನಡೆಸಲು ಗಣಿ ಮತ್ತು ಭೂವಿಜ್ಞಾನ, ಅರಣ್ಯ ಹಾಗೂ ಪರಿಸರ ಜೀವಿಶಾಸ್ತ್ರ ಇಲಾಖೆಯಿಂದ ಅನುಮತಿ ಅವಶ್ಯಕತೆ ಕಡ್ಡಾಯವೇ; (ಪೂರ್ಣ ವಿವರ ನೀಡುವುದು).

ಆ) ಅಧಿಕೃತ ಹಾಗೂ ಅನಧಿಕೃತ ಗಣಿಗಾರಿಕೆ ಇವೆರಡರ ಮಧ್ಯೆ ತಾಂತ್ರಿಕವಾಗಿ ಇರುವ ವ್ಯತ್ಯಾಸವೇನು; (ವಿವರಣೆ ನೀಡುವುದು).

ಇ) ಎಂ.ಎಂ. (ಡಿ & ಆರ್)ಕಾಯ್ದೆ, 1957 ಮತ್ತು ಖನಿಜ ರಿಯಾಯಿತಿ ನಿಯಮಾವಳಿ, 1960 ಮತ್ತು ಕರ್ನಾಟಕ ರಿಯಾಯಿತಿ ನಿಯಮಾವಳಿ, 1994ರ ಪ್ರಕಾರ, ಗಣಿಗುತ್ತಿಗೆಯನ್ನು ಪಡೆದು, ಗಣಿ ಗುತ್ತಿಗೆಗಾಗಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳನ್ವಯ ಗಣಿಗಾರಿಕೆಯನ್ನು ಮಾಡಿದ್ದಲ್ಲಿ, ಅದು ಅಧಿಕೃತ ಗಣಿಗಾರಿಕೆ ಹಾಗೂ ನಿಯಮಬಾಹಿರವಾಗಿ ಗಣಿಗಾರಿಕೆಯನ್ನು ಮಾಡಿದ್ದಲ್ಲಿ, ಅನಧಿಕೃತ ಗಣಿಗಾರಿಕೆಯಾಗುತ್ತದೆ.

ಈ) ಹುಣಸೂರು ತಾಲ್ಲೂಕಿನಲ್ಲಿ ಅಧಿಕೃತ ಗಣಿಗಾರಿಕೆ (ಮರಳು, ಜಲ್ಲಿಕಲ್ಲು, ಕ್ವಾರಿ, ಇತ್ಯಾದಿ) ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇದರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) & ಆ) ಪ್ರಮುಖ ಖನಿಜಗಳನ್ನು ಎಂ.ಎಂ. (ಡಿ & ಆರ್)ಕಾಯ್ದೆ, 1957 ಮತ್ತು ಖನಿಜ ರಿಯಾಯಿತಿ ನಿಯಮಾವಳಿ, 1960ರ ಪ್ರಕಾರ, ಭಾರತ ಸರ್ಕಾರದ ಗಣಿ ಮಂತ್ರಾಲಯದ ಪೂರ್ವಾನುಮೋದನೆಯೊಂದಿಗೆ ಮತ್ತು ಉಪ ಖನಿಜಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994 ಪ್ರಕಾರ ಮಂಜೂರು ಮಾಡಲಾಗುತ್ತದೆ. ಗಣಿಗಾರಿಕೆಯಲ್ಲಿ ಅರಣ್ಯ ಪ್ರದೇಶ ಒಳಗೊಂಡಿದ್ದಲ್ಲಿ, ಅರಣ್ಯ (ಸಂರಕ್ಷಣಾ) ಕಾಯ್ದೆ, 1980ರ ಪ್ರಕಾರ, ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯದಿಂದ ಪೂರ್ವಾನುಮೋದನೆಯನ್ನು ಪಡೆಯಬೇಕಾಗಿರುತ್ತದೆ. 5.00 ಹೆಕ್ಟೇರ್‌ಗಿಂತ ಹೆಚ್ಚಿನ ಪಟ್ಟಾ, ಕಂದಾಯ ಮತ್ತು ಅರಣ್ಯ ಪ್ರದೇಶಗಳಲ್ಲಿ ಗಣಿಗಾರಿಕೆ ಮಾಡಲು ಭಾರತ ಸರ್ಕಾರದ ಪರಿಸರ ಮಂತ್ರಾಲಯದಿಂದ (ಎಂ.ಓ.ಇ.ಎಫ್) ಪರಿಸರ ವಿಮೋಚನಾ ಪತ್ರವನ್ನೂ ಸಹ ಪಡೆಯಬೇಕಾಗುತ್ತದೆ. ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಅಧಿಕೃತವಾಗಿ ನಡೆಯುತ್ತಿರುವ ಗಣಿ ನಿಕ್ಷೇಪಗಳು ಯಾವುವು; (ಇವುಗಳ ಮಾಲೀಕರಾರು, ಅನುಮೋದನೆ ನೀಡಿದ ಆದೇಶದ ಪ್ರತಿಯೊಂದಿಗೆ ವಿವರಣೆ ನೀಡುವುದು);

ಇ) ವಿವರಗಳನ್ನು ಅನುಬಂಧ – 1 ರಲ್ಲಿ ನೀಡಿದೆ.

ಈ) ಹೌದು.

ಉ) ಅನಧಿಕೃತ ಕಲ್ಲುಗಣಿಗಾರಿಕೆಯನ್ನು ತಡೆಗಟ್ಟಲು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯು ಕಾರ್ಯಾಚರಣೆ ನಡೆಸಿ, ತಪ್ಪಿತಸ್ಥ 5 ವ್ಯಕ್ತಿಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲು ಮಾಡಿರುತ್ತದೆ. ಚಿಕ್ಕಹುಣಸೂರು ಗ್ರಾಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಶೇಖರಿಸಿದ್ದ 1614 ಮೆಟ್ರಿಕ್ ಟನ್ ಮರಳನ್ನು ವಸಪಡಿಸಿಕೊಂಡು, ಬಹಿರಂಗ ಹರಾಜಿನ ಮೂಲಕ ವಿಲೇ ಮಾಡಲಾಗಿದೆ. ಪ್ರಸ್ತುತ ಈ ಪ್ರದೇಶದಲ್ಲಿ ಅನಧಿಕೃತ ಮರಳು ಗಣಿಗಾರಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲಾಗಿದೆ.

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆಗಳ ವಿವರ

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಗಣಿ ಗುತ್ತಿಗೆ ಸಂಖ್ಯೆ	ಗ್ರಾಮ ಮತ್ತು ಸರ್ವೆ ನಂ.	ವಿಸ್ತೀರ್ಣ ಎಕರೆಗಳಲ್ಲಿ	ಖನಿಜ	ಗುತ್ತಿಗೆ ಮಂಜೂರಾದ ದಿನಾಂಕ ಮತ್ತು ಅವಧಿ
1	2	3	4	5	6	7
1	ಮುಖ್ಯ ಖನಿಜ ಮೆ:ದುಗಾರ್ ಇನ್ಸುಲೇಷನ್ ಇಂಡಿಯಾ ಪ್ರೈ.ಲಿ. C/o ಎಂ.ಪಿ.ಹರೀಶ್, ಶ್ರೀರಂಗಪಟ್ಟಣ	2503	ಹಂದನಹಳ್ಳಿ 94	9–27	ಪರ್ಮಿಕ್ಯ ಲೈಟ್	28–11–2005 20–ವರ್ಷಗಳು
2	ಜೇಡಿ ಮಿನರಲ್ಸ್, ನಂ 34, 34ನೇ ಮೈನ್, SSA ರಸ್ತೆ,	2270	ಆಸ್ಪತ್ರೆಕಾವಲ್	6–17	ಮ್ಯಾಗ್ನಸೈಟ್	5–5–2000 20–ವರ್ಷಗಳು

	ಹೆಬ್ಬಾಳ, ಬೆಂಗಳೂರು – 24					
3	ಶ್ರೀ ಶ್ರೀನಿವಾಸರಾವ್, ನಂ 22/14, 1ನೇ ಮಹಡಿ, 13ನೇ ಕ್ರಾಸ್, ವಸಂತನಗರ, ಬೆಂಗಳೂರು	2249	ಕಾಮಗೊಂಡನ ಹಳ್ಳಿ 56, 57/1A, 1B 227/B	10–00	ಮ್ಯಾಗ್ನಸೈಟ್	15–7–1999 20 ವರ್ಷಗಳು
4	ಶ್ರೀ ಶ್ರೀನಿವಾಸರಾವ್, ನಂ.22/14, 1ನೇ ಮಹಡಿ, 13ನೇ ಕ್ರಾಸ್, ವಸಂತನಗರ, ಬೆಂಗಳೂರು	2250	ಹನಗೋಡು 228,229	5–43	ಮ್ಯಾಗ್ನಸೈಟ್	15–7–1999 20 ವರ್ಷಗಳು
1	**ಅಲಂಕಾರ ಶಿಲೆ** ಶ್ರೀ ಎನ್. ಚಂದ್ರಶೇಖರನ್, ಮೆಟ್ಟೂರು ಡ್ಯಾಂ, ಚೆನ್ನೈ	195	ಬೆಟ್ಟದೂರು 64	3–00	ಕಪ್ಪು ಶಿಲೆ	26–6–1998 10–ವರ್ಷಗಳು ನವೀಕರಣ ಹಂತ

						ದಲ್ಲಿರುತ್ತದೆ
1	**ಕಟ್ಟಡ ಕಲ್ಲು** ಮೆ.ಆರ್.ಎನ್.ನಾಯಕ್ ಅಂಡ್ ಸನ್ಸ್, ನಂ.51, ನಾಯಕ್ ಚೇಂಬರ್ಸ್, ಹುಬ್ಬಳ್ಳಿ.	300	ಬನ್ನಿಕುಪ್ಪೆ 105	6–00	ಕಟ್ಟಡ ಕಲ್ಲು	2–8–2005 5–ವರ್ಷಗಳು
2	ಶ್ರೀ ಅಬ್ದುಲ್ ಸಲಾಂ	301	ಮಲ್ಲಿನಾಥಪುರ 55/11, 55/P4 D7	1–20	ಕಟ್ಟಡ ಕಲ್ಲು	10–8–2005 5–ವರ್ಷಗಳು
3	----------	-----	----------	-------	-----	----------
4	ಶ್ರೀ ಹೆಚ್.ಕೆ.ಲಕ್ಷ್ಮಣೇಗೌಡ,	340	ಕೊತ್ತೆಗಾಲ	3–00	ಕಡದ	6–10–2006

	ಚೆಲ್ಕುಂದ ಗ್ರಾಮ, ಹುಣಸೂರು ತಾಲ್ಲೂಕು.		176		ಕಲ್ಲು	5–ವರ್ಷಗಳು
5	ಶ್ರೀ ಹೆಚ್.ಕೆ.ಲಕ್ಷ್ಮಣೇಗೌಡ, ಚೆಲ್ಕುಂದ ಗ್ರಾಮ, ಹುಣಸೂರು ತಾಲ್ಲೂಕು.	341	ಕೊತ್ತೆಗಾಲ 176	1–00	ಕಡದ ಕಲ್ಲು	6–10–2006 5–ವರ್ಷಗಳು
6	ಶ್ರೀ ಹೆಚ್.ಕೆ.ಲಕ್ಷ್ಮಣೇಗೌಡ, ಚೆಲ್ಕುಂದ ಗ್ರಾಮ, ಹುಣಸೂರು ತಾಲ್ಲೂಕು.	342	ಅತ್ತಿಗುಪ್ಪೆ 22	1–00	ಕಡದ ಕಲ್ಲು	6–10–2006 5–ವರ್ಷಗಳು
7	ಶ್ರೀ ಹೆಚ್.ಕೆ.ಲಕ್ಷ್ಮಣೇಗೌಡ, ಚೆಲ್ಕುಂದ ಗ್ರಾಮ, ಹುಣಸೂರು ತಾಲ್ಲೂಕು.	343	ಅತ್ತಿಗುಪ್ಪೆ 22	1–00	ಕಡದ ಕಲ್ಲು	6–10–2006 5–ವರ್ಷಗಳು
8	ಶ್ರೀ ಪಿ.ಆರ್. ಸಣ್ಣಸ್ವಾಮಿ.	380	ಉಮ್ಮತ್ತೂರು	0–20	ಕಡದ	9–3–2007

	ಉಮ್ಮತ್ತೂರು ಗ್ರಾಮ, ಹುಣಸೂರು ತಾಲ್ಲೂಕು.		69/31		ಕಲ್ಲು	5–ವರ್ಷಗಳು
9	**ಮರಳು ಹರಾಜು ಗುತ್ತಿಗೆ** ಶ್ರೀ ಬಿಕ್ಕ ನಹಳ್ಳಿ ನಾಗೇಗೌಡ ಬಿನ್ ಶ್ರೀ ಸಿದ್ದೇಗೌಡ, ಚಿಕ್ಕನಹಳ್ಳಿ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು.	517	ಹಿಂಡಗೋಡ್ಲು ಬ್ಲಾಕ್ ನಂ.1	5–00	ಸಾಮಾನ್ಯ ಮರಳು	20–11–2009 1 ವರ್ಷ

ಟಿಪ್ಪಣಿ: ಮರಳು ಗಣಿಗಾರಿಕೆಯಿಂದ ಹನಗೋಡುಕಟ್ಟೆಗೆ ತೊಂದರೆಯುಂಟಾಗುತ್ತಿದ್ದು, ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಹಿಂಡಗೋಡ್ಲು ಗ್ರಾಮಸ್ಥರು ಉಪ ವಿಭಾಗಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ಮಾಡಿದ ಪ್ರಯುಕ್ತ ಇಲಾಖೆಯ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಮರಳು ಹರಾಜು ನೀಡಿರುವ ಪ್ರದೇಶವು ಹನಗೋಡುಕಟ್ಟೆಯಿಂದ 200 ಮೀ. ಅಂತರದಲ್ಲಿರುವುದಾಗಿ ವರದಿ ನೀಡಿರುತ್ತಾರೆ. ಗ್ರಾಮಸ್ಥರ ಪ್ರತಿಭಟನೆಯಿಂದಾಗಿ ಮರಳು ಗಣಿಗಾರಿಕೆಯನ್ನು ಸ್ಥಗಿತ ಗೊಳಿಸಲಾಗಿದೆ. ಗುತ್ತಿಗೆದಾರರು ಇದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P.No.12473/2010 ರಂತೆ ಮೊಕದ್ದಮೆ ದಾಖಲಿಸಿರುತ್ತಾರೆ.

GOVERNMENT OF KARNATAKA
Office of the Director.
Department of Mines and Geology,
Khanija Bhavan, Race Course Road.
Bangalore – 560001. Dt: 18.7.2005.

NOTIFICATION

In persuanc of section 5 read with section 8 of Mines and Minerals (Development and Regulation) Act, 1957 and in exercise of the powers delegated under the State Government, Notification No.CI3 MMM 95, dated 27-05-1995, The Director of Mines and Geology, Bangalore hereby sancation the mining lease of Vermiculite (Non-Schedule Mineral) in favour of M/S. Dugar Insulation India PVT.Ltd. over an area of 9.27 acres in Handanahalli village, Hunsur taluk, Mysore District for a period of 20 years. Bounded as follows.

On the North by – Part of Sy.No.94
On the South by – Part of Sy.No.94
On the East by – Part of Sy.No.94

On the West by – Part of Sy.No.94

The grant of the mining lease is subject to the terms and conditions stipulated under Rule of M.C.R-1960 as appended herewith. The grantee should execute the mining lease deeds within six (06) months from the date of issue of this Notification, failing which the notification will be revoked as per Rule-31 of MCR.1960

Sd/-
DIRECTOR

To,
M/s. Dugar Insulation India Pvt.Ltd.
Dugar Towers, 34 (123),
Marshal Road Egmore,
Chennai-600008.

GOVERNMENT OF KARNATAKA
Office of the Director.
Department of Mines and Geology,
NO.16, S.P.Complex, Lalbagh Road,
Bangalore-27, Dated 12-11-1999.

NOTIFICATION

In pursuance of Section 5 read with Section 8 of Mines and Minerals (Regulation and Development) Act 1957 and in exercise of power delegated under State Government Notification No.CI.3 MMM 93 dated 27-05-95, the Director of Mines and Geology, Bangalore hereby sanction a Mining Lease for Magnesite over an area of 2.49 Hects (6-17 Acres) in Sy.No.1 of Aspathre Kaval Village, Hunasur Taluk,

Mysore District, for a period of Twenty (20) years in favour of M/s. Jedee Minerals, bounded as follows:

On the North by – Part Sy.No.1
On the South by – Part Sy.No.1
On the East by – Part Sy.No.1
On the West by – Part Sy.No.1
As per sketch enclosed.

The grant of Mining Lease is subject to the terms & conditions stiupulated under rules of Mineral concession Rules – 1960, as appended herewith. The grantee should execute the mining lease deeds with Six (6) months from the date of this Notification, as per Rule 31 of Mineral Concession Rules 1960 failing which the Notification will be revoked.

Sd/-
DIRECTOR

To,
M/s. Jedee Minerals,
37 B, S.B.M. Colony,
Anand Nagar, Hebbal,
BANGALORE – 560024.

Copy to:

1. The Secretary to Government of Karnataka, Mines, small Scale Industries & Textiles, Commerce & Industries Department, Bangalore-1.
2. The Deputy Commissioner, Mysore District, Mysore.

3. The Geologist (Mineral), Department of Mines and Geology, Mysore to conduct Survey and Demacration of the are and furnish the report at the earliest.
4. The Regional Controller of Mines, I.B.M. No 29, Industrial Sub-urb, II Stage, Tumkur Road, Yeshwanthpur, Bangalore-22.
5. The Director of Mines Safety, Oorgaum Region, Oorgaum, K.G.F. – 563120.
6. The Suptd., D.C.B. Section, Head Office, DMG, Bangalore – 560027.
7. Drawing Branch, Head Office, Bangalore- 560027.
8. Master File, M.L. Section, Head Office, Bangalore – 560027.

GOVERNMENT OF KARNATAKA

Office of the Director.
Department of Mines and Geology,
S.P.Complex, Lalbagh Road,
Bangalore – 560027.
Dated : 10th Feb 1999

NOTIFICATION

In pursuance of Section 5 read with Setion 8 of Mines and Minerals (Regulation and Development) Act 1957 and in exercise of power delegated under State Government Notification No.CI.3 MMM 95, the Director of Mines and Geology, Bangalore hereby sanction a Mining Lease for Magnesite over an area of 4.05 Hects (10-00 Acres) in part

Sy.Nos.56,57 (1A, 1B) and 227 B, of kamagomdanahalli and Nanagodu village, Hunasur taluk, Mysore district, in favour of Sri k. Srinivasa Rao, for a period of 20 years as per sketch enclosed ,bounded as follows :

North --- Sy.No.54,55. 56&59
South. --- Sy.No.227 & Road.
East --- Sy. No .53/1.
West --- Sy. No.225 &226

The grant of Mining Lease is subject to the terms & conditions stiupulated under rules of Mineral concession Rules – M.C.R. 1960, as appended here with. The grantee should execute the mining lease deeds with Six (6) months from the date of this Notification, as per Rule 31 of Mineral Concession Rules 1960

Sd/-
DIRECTOR

To
Sri K. Srinivas Rao,
No-59, 6th Cross, 4th Block,
M.L.A. Layout, Rajmahal vilas,
2nd Stage, Bangalore-560094

GOVERNMENT OF KARNATAKA

No. URG:150 ARL 94.

NOTIFICATION

In pursuance ofsection 5 road with Section 8 of mines and minerals (Regulatics and development) Act, 1957 and in exercise of powered delegated under State Government Retification No. CI 3 HKM NBM 95. dtd.27.5.95. the

Director of Mines and Geology, Bangalore, hereby sanctions Mines Lease for magnesite over an area of 2.12 Hects. In parts of fly. Nos. 228 and 229 of managodu village, Hunsur taluk, Mysore District, in favour ofsr. K. Srinivasa Rao, for a period of 20years as per sketch enclosed

The grant of mines lease is subject to the terms and conditions stripulated under rules of NCS. 1960, as appended herwith. The grantee should executes the HL deeds within 6 (six) months from the date of this Notification, as per rule 31 of HO 1960 failing which the notification will be revoked.

DIRECTOR OF MINES & GEOLOGY

To
Sri.k. Srinivasa Rao,
59,6th Cross, IV Block,
RMV IInd Stage, MLA Layout,
Bangalore-560094

GOVERNMENT OF KARNATAKA

Office of the Director.
Department of Mines and Geology,
S.P.Complex, Lalbagh Road,
Bangalore – 560027.
Dated : 28th june1998

To,
Sr. N. Chandrashekaran,
M/S. South Mines Minerals,
No.37/135, Salem Main road,
Mettur Dam -636402

Salem District(T.N)

GOVERNMENT OF KARNATAKA

NO: MDN/DMG/SG/MY/05-06

Office of the Senior Geologist, (Minerals)
Department of Mines of Geology,
No.4, Gaganachumbi Double Road,
Kuvempunagar, Mysore – 570 023.
Dated: 06-01-2006

TO:

R.N. Nayak & Sons
Nayak Chambers
N0.51, Raja Nagar,
Hubli -32.

Sir,

Sub : Execution of quarrying lease for B.Stone over 0.32 acres in Sy. No. 56 of Hairige village Hunsur Taluk Mysore District.

I enclosed here with the quarrying lease deed No.311 on duplicate for Building Stone over 0.32 acres in Sy. No.56 of Hairige Village, Hunsur Taluk, Mysore District for a period of Five years, with effect from 06-01-2006 and request you to get the same registered within 90 days from the date of execution in concerned sub-Registar's office and return the duplicate to this office for record. One blank deed together with one certified copy of the plan is also sent for use in sub-registrar's Office.

The terms and conditions as laid down in the quarry lease deed should be strictly complied with.

The lessee is required to submit regularly monthly returns of production and dispatches of the minerals by the 8th of the succeeding month and pay royalty that become payable on and production.

Quarrying has to be limited to 6 meters depth from the surface level and 50 meeters safe margin has to be left from the public roads, railways, public buildings, reservoir, canal etc, if no blasting is involved.

Please acknowledge the receipt of this letter.

Yours faithfully,,

Copy together with a copy of the deed forwarded.

1) The Director, Dept. of Mines & Geology, Bangalore
2) The Deputy Commissioner, Mysore.
3) The Tahasildar, Hunsur.

ಕರ್ನಾಟಕ ಸರ್ಕಾರ

ಕನ್ನಡ ಅನುಷ್ಠಾನ ವರ್ಷ 2009,

ಸಂಖ್ಯೆ: ಗಭೂಇ.ಹಿಭೂವಿಮೈ.ಮರಳು:09–10

ಹಿರಿಯ ಭೂವಿಜ್ಞಾನಿ (ಖ)ರವರ ಕಛೇರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಂ. 4 ಗಗನಚುಂಬಿ ಜೋಡಿ ರಸ್ತೆ
ಕುವೆಂಪುನಗರ, ಮೈಸೂರು
ದಿನಾಂಕ : 20–11–2009.

ಕಛೇರಿ ಆದೇಶ

ವಿಷಯ: ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಹಿಂಡಗೊಡ್ಲು ಗ್ರಾಮದ ಬ್ಲಾಕ್

ಸಂಖ್ಯೆ 1 ನ್ನು ಮರಳು ಹರಾಜಿನಲ್ಲಿ ಪಡೆದ ಗಣಿ ಗುತ್ತಿಗೆಯನ್ನು ನವೀಕರಿಸುವ ಬಗ್ಗೆ.

ಉಲ್ಲೇಖ 1.: ಮಾನ್ಯ ಉಚ್ಚ ನ್ಯಾಯಾಲಯದ W.P. No.13970/08(GM-MMS)

2. ಜಂಟಿ ನಿರ್ದೇಶಕರು, ಗಭೂಇ(ದವ) ಮೈಸೂರು ರವರ ಪತ್ರ ಸಂ: ಗಭೂಇ:ಜನಿಮೈ: ರಿವಿಷನ್ : 80–09 ದಿನಾಂಕ 16–08–2009

3. ಮಾನ್ಯ ಜಿಲ್ಲಾಧಿಕಾರಿಗಳ ಕಂಡಿಕೆ 59ರ ಅನುಮತಿಯಂತೆ.

4. ಸರ್ಕಾರದ ಆದೇಶ ಸಂ: ಸಿ.ಐ. 302/ಒಒಓ/09–10 Dated:10–1–2009

***

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಹಿಂಡುಗೊಡ್ಲು ಗ್ರಾಮದ ಲಕ್ಷ್ಮಣ ತೀರ್ಥ ನದಿ ಪಾತ್ರದಲ್ಲಿನ ಬ್ಲಾಕ್ ಸಂಖ್ಯೆ 1 ರ 5–00 ಎಕರೆ ಪ್ರದೇಶವನ್ನು ಶ್ರೀ ನಾಗೇಗೌಡ ಬಿನ್ ಸಿದ್ದೇಗೌಡ ಇವರಿಗೆ ಬಹಿರಂಗ ಹರಾಜು ಮೂಲಕ ದಿನಾಂಕ : 27–1–2006 ರಿಂದ ಒಂದು ವರ್ಷದ ಅವಧಿಗೆ ಮರಳು ಗಣಿರಿಗಾರಿಕೆಗಾಗಿ ಮಂಜೂರು ಮಾಡಲಾಗಿತ್ತು. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಮರಳು ಉಸ್ತುವಾರಿ ಸಮಿತಿ ರವರ ಕಂಡಿಕೆ 37ರ ಅನುಮತಿಯಂತೆ ದಿನಾಂಕ : 20–8–2007 ರಿಂದ ಒಂದು ವರ್ಷದ ಅವಧಿಗೆ ಮೊದಲನೇ ನವೀಕರಣ ಮಾಡಲಾಗಿತ್ತು ಬಿಡ್‌ದಾರರು 3ನೇ ಅವಧಿಗೆ 2ನೇ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ಉಲ್ಲೇಖ (1)ರ ಮಾನ್ಯ ಉಚ್ಚನ್ಯಾಯಾಲಯದ ಅದೇಶದಂತೆ ಉಲ್ಲೇಖ (2)ರ ಪರಿಷ್ಕರಣ ಪ್ರಾಧಿಕಾರಿಯವರು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯಿಂದ ಅನುಮೋದನೆ ಪಡೆದು ನವೀಕರಿಸುವಂತೆ ಆದೇಶ ನೀಡಿದ್ದ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಮರಳು ಉಸ್ತುವಾರಿ ಸಮಿತಿ ಅಧ್ಯಕ್ಷರು ಟಿಪ್ಪಣಿ ಪುಟ ಸಂಖ್ಯೆ 14 ರ ಕಂಡಿಕೆ 59ರಲ್ಲಿ ಅನುಮತಿ ನೀಡಿರುವಂತೆ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು ಹಿಂದುಗೊಡ್ಲು ಗ್ರಾಮದ ಲಕ್ಷ್ಮಣ ತೀರ್ಥ ನದಿ ಪಾತ್ರದ ಬ್ಲಾಕ್ ನಂ. 1ರ 5–00 ಎಕರೆ ಪ್ರದೇಶವನ್ನು ಕೆ.ಎಂ.ಎಂ.ಸಿ. 1994 ರ ನಿಯಮ

21(2B) (iii) ರಂತೆ ಗಣಿ ಗುತ್ತಿಗೆಯು 2ನೇ (3ನೇ ಅವಧಿ) ನವೀಕರಣವನ್ನು ದಿನಾಂಕ: 20-11-2009 ರಿಂದ ಅನ್ವಯವಾಗಯವಾಗುವಂತೆ 1 ವರ್ಷದ ವರೆಗೆ ಅಥವಾ ಹೊಸ ಮರಳು ನೀತಿ ಜಾರಿಗೆ ಬರುವವರೆಗೆ, ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ನವೀಕರಣವನ್ನು ಮಜೂರು ಮಾಡಿದೆ.

1. ಗುತ್ತಿಗೆ ಕರಾರು ಮತ್ತು ಮರಳು ಹರಾಜು ನಿಯಮಾವಳಿಯಂತೆ ಮರಳು ಗಣಿಗಾರಿಕೆಯನ್ನು ಒಂದು ಮೀಟರ್ ಆಳದವರೆಗೆ ಮಾತ್ರ ಸೀಮಿತಗೊಳಿಸುವುದು
2. ಹರಾಜು ಗುತ್ತಿಗೆ ನೀಡಲಾದ ಪ್ರದೇಶದಿಂದ ಹೊರಗೆ ಗಣಿಗಾರಿಕೆ ಮಾಡಕೂಡದು.
3. ಪರಿಸರ ಮಾಲಿನ್ಯಕ್ಕೆ ಅವಕಾಶ ನೀಡುವಂತಹ ಯಾವುದೇ ಯಂತ್ರೋಪಕರಣಗಳನ್ನು ಬಳಸಬಾರದು.
4. ರಾತ್ರಿ ಗಣಿಗಾರಿಕೆ ಹಾಗೂ ಸಾಗಾಣಿಕೆ ಮಾಡಕೂಡದು.
5. ಗುತ್ತಿಗೆ ಪ್ರದೇಶದ ಗುಡಿ ಗುರುತುಗಳನ್ನು ಕಾಪಾಡಿಕೊಳ್ಳುವುದು.
6. ಗುತ್ತಿಗೆ ಪ್ರದೇಶದ ವಿವರಗಳನ್ನೊಳಗೊಂಡ ನಾಮಫಲಕಗಳನ್ನು ಹಾಕುವುದು.
7. ಸಾಗಾಣಿಕಾ ಚೀಟಿಯಲ್ಲಿ ನಮೂದಿಸಿರುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ಮರಳನ್ನು ವಾಹನಗಳಿಗೆ ತುಂಬುವುದಾಗಲೀ ಸಾಗಾಣಿಕೆ ಮಾಡುವುದಾಗಲೀ ಹಾಗೂ ನೀರು ಮಿಶ್ರಿತ ಮರಳು ಸಾಗಾಣಿಕೆಯನ್ನು ಕಡ್ಡಾಯವಾಗಿ ನಿಷೇದಿಸಿದೆ.

   ಮೇಲಿನ ಕಾನೂನು ಹಾಗೂ ಷರತ್ತುಗಳನ್ನು ಉಲ್ಲಂಘಿಸಿ ಗಣಿಗಾರಿಕೆ ಮಾಡಿದಲ್ಲಿ ನಿಯಮಾನುಸಾರ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

ಸಹಿ:

ಹಿರಿಯ ಭೂವಿಜ್ಞಾನಿ (ಖ)

ಮೈಸೂರು.

ಗೆ,

ಶ್ರೀ ನಾಗೇಗೌಡ ಬಿನ ಸಿದ್ದೇಗೌಡ
ಚಿಕ್ಕನಹಳ್ಳಿ ಗ್ರಾಮ, ಆನಂದೂರು ಆಂಚೆ
ಇಲವಾಲ ಹೋಬಳಿ, ಮೈಸೂರು ತಾಲ್ಲೂಕು

ಪ್ರತಿಯನ್ನು 1. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಮರಳು ಉಸ್ತುವಾರಿ ಸಮಿತಿ, ಮೈಸೂರು ಜಿಲ್ಲೆ, ಮೈಸೂರು, ಇವರ ಮಾಹಿತಿಗಾಗಿ ಸಲ್ಲಿಸಿದೆ.

2. ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಗಣಿ ಮತ್ತು ಭೂವಿಜ್ಞಾನಿ ಇಲಾಖೆ, ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.

3. ಉಪ ವಿಭಾಗಾಧಿಕಾರಿಗಳು, ಹುಣಸೂರು ಉಪ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಕಳುಹಿಸಿದೆ.

4. ತಹಸೀಲ್ದಾರ್, ಹುಣಸೂರು ತಾಲ್ಲೂಕು, ಹುಣಸೂರು ರವರ ಮಾಹಿತಿಗಾಗಿ ಕಳುಹಿಸಿದೆ.

ಹಿರಿಯ ಭೂವಿಜ್ಞಾನಿ (ಖ)
ಮೈಸೂರು

ಶ್ರೀ ಹೆಚ್. ಪಿ. ಮಂಜುನಾಥ್: ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಪ್ರತಿ ದಿವಸ ವಿಧಾನಸಭೆಯಲ್ಲಿ ಕುಳಿತಾಗಲೂ ಸತ್ಯಕ್ಕೆ ದೂರವಾದ ವಿಷಯವನ್ನು ಕೇಳಬೇಕಾಗಿದೆ. ನಾನು ಖುದ್ದಾಗಿ ಅಲ್ಲಿಯ ಸ್ಪಾಟ್‌ಗೆ ಹೋಗಿ, ಸಂಬಂಧಪಟ್ಟ RI, ಇಲಾಖೆಯವರಿಗೆ ಫೋನ್ ಮಾಡಿ, ಅವನ್ನು ಕೂಡಲೆ ಮುಚ್ಚಿಸಿ ಎಂದು ಹೇಳಿದರೂ ಕೂಡ, ನಿನ್ನೆಯೂ ಕೂಡ ಗಣಿಗಾರಿಕೆ ನಡೆಯುತ್ತಿದೆ. ಇಲ್ಲಿ ನಮಗೆ ಉತ್ತರ ಕೊಟ್ಟಿರುವುದೇನೆಂದರೆ, ಟಾಸ್ಕ್ ಫೋರ್ಸ್ ಬಂದು ಇದನ್ನು ಮುಚ್ಚಿಸಿದ್ದೇವೆ, ಯಾವುದೂ ತಾಲ್ಲೂಕಿನಲ್ಲಿ ನಡೆಯುತ್ತಿಲ್ಲವೆಂದು ಹೇಳುತ್ತಿದ್ದಾರೆ. ಕಳೆದ ಒಂದೂವರೆ ವರ್ಷಗಳಿಂದ ಎಲ್ಲಾ ಅಧಿಕಾರಿಗಳಿಗೂ, ನಮ್ಮ ಹುಣಸೂರು ತಾಲ್ಲೂಕಿನಲ್ಲಿರುವ ಎಲ್ಲಾ ಜಾಡುಗಳನ್ನು

ಹರಾಜು ಮಾಡಿದರೆಂದು 8–10 ಪತ್ರಗಳನ್ನು ಡಿಸಿಯವರಿಗಾಗಲಿ, ಎ.ಡಿ. ಖನಿಜ ಸಂಪತ್ತು ಇವರಿಗಾಗಲಿ ಬರೆದಿದ್ದೇವೆ, ಇವತ್ತಿನವರೆವಿಗೂ ಯಾರು ಗಮನಹರಿಸಿಲ್ಲ. ಅಲ್ಲಿ ಏನಾಗಿದೆ ಎಂದರೆ ಲಂಚವೇ ಒಂದು ಲಕ್ಷ ರೂಪಾಯಿಗಳು ಹೋಗುತ್ತಿದೆ, ಈ ಬಗ್ಗೆ ಯಾವ ರೀತಿ ಮಾಡನಾಡಬೇಕೆಂಬುದು ಗೊತ್ತಿಲ್ಲ. ಜೊತೆಗೆ ಸರ್ಕಾರಕ್ಕೆ ತಿಂಗಳಿಗೆ ಒಂದು–ಒಂದೂವರೆಸಾವಿರ ರೂಪಾಯಿಗಳ ಫೀ ಮಾತ್ರ ಕಟ್ಟುತ್ತಿದ್ದಾರೆ, ಅಧಿಕಾರಿಗಳು ತಿಂಗಳಿಗೆ ಲಕ್ಷಾಂತರ ರೂಪಾಯಿಗಳನ್ನು ತಿನ್ನುತ್ತಿದ್ದಾರೆ. ಇಲ್ಲಿ ಲೋಡ್ ಹೋಗುತ್ತಿದೆ, ಖನಿಜ ಸಂಪತ್ತು ಲೂಟಿಯಾಗುತ್ತಿದೆ ಎನ್ನುವುದಕ್ಕಿಂತ ಹೆಚ್ಚಾಗಿ ಪೊಲೀಸ್, ರೆವಿನ್ಯೂ ಮತ್ತು ಮೈನ್ಸ್ ಈ ಮೂರು ಇಲಾಖೆಗಳು ಒಗ್ಗಟ್ಟಾಗಿಯೂ ಕೂಡ ಇಲ್ಲ, ನಮಗೆ ಸಂಬಂಧಪಟ್ಟಿದ್ದಲ್ಲವೆಂದು ಇದ್ದಾರೆ. ರೆವಿನ್ಯೂ ಇಲಾಖೆಯವರು ಲೂಟಿಯಾಗುತ್ತಿದೆ ಎಂದು ಪೊಲೀಸ್ ಇಲಾಖೆಗೆ ದೂರು ನೀಡುತ್ತಿದ್ದಾರೆ. ಕ್ರಮ ತೆಗೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು : ಕೊಟ್ಟ ಉತ್ತರದಲ್ಲಿ ಕ್ಲಾರಿಫಿಕೇಷನ್ ಇದ್ದರೆ ಕೇಳಬೇಕು. ಎಲ್ಲಾ ವಿವರಣೆಗೆ ಹೋಗಬೇಡಿ.

ಶ್ರೀ ಹೆಚ್. ಪಿ. ಮಂಜುನಾಥ್ : ಕೊಟ್ಟ ಉತ್ತರದಲ್ಲಿ ಸತ್ಯಕ್ಕೆ ದೂರವಾದ ಮಾಹಿತಿ ಕೊಟ್ಟಿದ್ದಾರೆ, ಅದನ್ನೆ ನಾನು ಹೇಳುತ್ತಿದ್ದೇನೆ, ರೆವಿನ್ಯೂ ಇಲಾಖೆಯಿಂದ ಪೊಲೀಸ್ ಇಲಾಖೆಗೆ ಇದಕ್ಕೆ ರಕ್ಷಣೆ ಕೊಡಿ ಕೂಡಲೆ ಸೀಜ್ ಮಾಡಿ ಎಂದು ಪತ್ರ ಬರೆದಿದ್ದಾರೆ. ಪೊಲೀಸ್ ಇಲಾಖೆಯಿಂದ ಇದಕ್ಕೂ ನಮಗೂ ಏನೂ ಸಂಬಂಧವಿಲ್ಲ, ಸೀಜ್ ಮಾಡಿ ತಂದು ಕೊಟ್ಟರೆ ನೋಡಿಕೊಳ್ಳುತ್ತೇವೆಂದು ಎಂಡಾರ್ಸ್‌ಮೆಂಟ್ ನಲ್ಲಿ ಉತ್ತರ ಕೊಟ್ಟಿದ್ದಾರೆ. ಇದನ್ನು ಯಾವರೀತಿ ತಡೆಯುವುದು? ಸರ್ಕಾರವೇ ಬರಲಿಲ್ಲವೆಂದರೆ ಯಾರೋ ಲೂಟಿ ಮಾಡಿಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು : ಉತ್ತರ ಸರಿಯಿಲ್ಲವೆಂದರೆ ಮತ್ತೆ ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮರಳು ಗಣಿಗಾರಿಕೆಯಿಂದ ಹನಗೋಡು ಕಟ್ಟೆಗೆ ತೊಂದರೆಯಾಗುತ್ತಿದೆ, ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಹಿಂಡಗೋಡ್ಲು ಗ್ರಾಮಸ್ಥರು ಉಪ ವಿಭಾಗಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ಮಾಡಿದ ಪ್ರಯುಕ್ತ ಇಲಾಖೆ

ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಮರಳು ಹರಾಜು ನಡೆಯುವ ಪ್ರದೇಶ, ಹನಗೋಡು ಕಟ್ಟೆಯಿಂದ 200 ಮೀಟರ್ ಅಂತರದಲ್ಲಿರುವುದಾಗಿ ವರದಿ ನೀಡಿದ್ದಾರೆ. ಗ್ರಾಮಸ್ಥರ ಪ್ರತಿಭಟನೆಯಿಂದಾಗಿ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ. ನಾನು ನಿಮಗೆ ಒಂದೇ ಒಂದು ವಿನಂತಿ ಮಾಡುತ್ತೇನೆ. ದಯಮಾಡಿ ಬನ್ನಿ, ಅಧಿಕಾರಿಗಳನ್ನೂ ಕರೆಸುತ್ತೇನೆ. ಈ ಮರಳು ಸಾಗಾಣಿಕೆಯಿಂದ ದೊಡ್ಡ ಪ್ರಮಾಣದಲ್ಲಿ ಸಾಕಷ್ಟು ಲೂಟಿಯೇ ನಡೆಯುತ್ತಿದೆ. ಇದಕ್ಕೆ ಹೊಸ ನೀತಿ ತರುವುದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಬಿಗಿ ಮಾಡಿದ ಹಾಗೆ ಇಲ್ಲಿಯೂ ಬಿಗಿ ಮಾಡುವುದಕ್ಕೆ ನಾವು ಸದ್ಯದಲ್ಲಿಯೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಎರಡು ವಿಷಯ ಇದೆ. ಯಾರೋ ಒಬ್ಬ ಯಾವುದೋ ಒಂದು ಪಾಯಿಂಟ್ ಅನ್ನು ತನ್ನ ಹೆಸರಿಗೆ ಮಾಡಿಸಿಕೊಳ್ಳುತ್ತಾನೆ, ಕಿರುಕುಳ ಕೊಡುತ್ತಾನೆ, ಅವನು ಆ ಬ್ಲಾಕ್ ತೆಗೆದುಕೊಂಡ ಮೇಲೆ ಅಲ್ಲಿ ಯಾರೂ ಬರುವುದಕ್ಕೆ ಬಿಡುವುದಿಲ್ಲ. ಮರಳೂ ಸಹ ಕೊಡದೆ ತೊಂದರೆ ನಿರ್ಮಾಣ ಮಾಡುವುದು ನಡೆಯುತ್ತಿದೆ. ಇದಕ್ಕೆ ನೇರವಾಗಿ ಲೋಕೋಪಯೋಗಿ ಇಲಾಖೆಯಿಂದ ಪರ್ಮಿಟ್ ಕೊಟ್ಟು ಯಾವುದೇ ತೊಂದರೆಯಾಗದ ಹಾಗೆ ಮಾಡಬೇಕು. ಏಕೆಂದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಟ್ಟಡಗಳು ಹಾಗೂ ಕೆಲಸಕಾರ್ಯಗಳಾಗಬೇಕಾದರೆ ಮರಳಿನ ಅಗತ್ಯವಿದೆ. ಯಾರೋ ಕೆಲವರ ಪಾಲಾಗುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಬಹಳ ಚಿಂತನೆಗಳನ್ನು ನಡೆಸಿದ್ದೇವೆ, ಸದ್ಯದಲ್ಲಿಯೇ ದೃಢ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ನಿಮ್ಮ ಸಮಸ್ಯೆ ಏನಿದೆ ಅದನ್ನು ತಕ್ಷಣ ನಾನು ಬಗೆಹರಿಸುತ್ತೇನೆ. ನಿಮ್ಮನ್ನೂ ಹಾಗೂ ಅಧಿಕಾರಿಗಳನ್ನು ಕರೆದು ನಾನು ಸಮಸ್ಯೆ ಬಗೆಹರಿಸುತ್ತೇನೆ.

ಶ್ರೀ ಹೆಚ್. ಪಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಮೇಲ್ಮಟ್ಟದಲ್ಲಿ ಶಾಮೀಲಾಗಿದ್ದಾರೋ ಹೇಗೋ ಗೊತ್ತಿಲ್ಲ. ನಾವೇ ಶಾಮೀಲಾಗಿದ್ದರೆ ನಮ್ಮ ಬಗ್ಗೆ ಧಿಕ್ಕಾರ ಕೂಗಿ. ನಾವು ಅಷ್ಟು ಪ್ರಾಮಾಣಿಕತೆಯಿಂದ ಇದ್ದರೂ ಕೂಡ ನಾವು ಬೆರಳು ತೋರಿಸಿಕೊಳ್ಳುವ ಮಟ್ಟಕ್ಕೆ ಬಂದಿದ್ದೇವೆ. ಅನುಬಂಧ 1ರಲ್ಲಿ ನಮ್ಮ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಕೊಟ್ಟಿದ್ದಾರೆಂದು ಪ್ರಶ್ನೆ ಇದೆ. ಇಲ್ಲಿ ಕೊಟ್ಟಿರುವುದೆಲ್ಲಾ ಗೋಮಾಳ ಆಗಿದೆ, ಅರಣ್ಯ ಇಲಾಖೆ ಜಮೀನಾಗಿದೆ, ಈ ತರಹ ಕೊಟ್ಟು

ಎಲ್ಲರೂ 20–20 ವರ್ಷ ಪರ್ಮಿಷನ್ ತೆಗೆದುಕೊಳ್ಳುತ್ತಾರೆ ನಿಮ್ಮ ಸರ್ಕಾರ ಬಂದಮೇಲೆ ಕೊಟ್ಟಿದೆ ಎಂದು ಹೇಳುತ್ತಿಲ್ಲ. ಮತ್ತೆ ಇದನ್ನು ನವೀಕರಣ ಮಾಡುವುದಕ್ಕೆ ಬಿಡಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ನಾನು ಸರಿಪಡಿಸಿ ಕೊಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದೊಂದು ಮಾಫಿಯಾ. ಗಣಿ ಹೇಗೋ ಮರಳಿನದೂ ಒಂದು ದಂಧೆ. ಹೋದ ವರ್ಷ ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿತ್ತು. ಮಾನ್ಯ ಅಶೋಕ್‌ರವರು ಉತ್ತರ ಕೊಟ್ಟಿದ್ದು ನನಗೆ ಇನ್ನೂ ಜ್ಞಾಪಕ ಇದೆ. ಒಂದು ವರ್ಷದ ಹಿಂದೆ ಹೊಸ ನೀತಿ ತರುತ್ತೇವೆ, ನಮ್ಮ ಅಧಿಕಾರಿಗಳು ತಮಿಳುನಾಡಿಗೆ ಹೋಗಿದ್ದಾರೆ, ನೋಡಿಕೊಂಡು ಬರುತ್ತಾರೆ, ನೋಡಿಕೊಂಡು ಬಂದ ಮೇಲೆ ಹೊಸ ನೀತಿ ತರುತ್ತೇವೆಂದು ಹೇಳಿದಿರಿ. ಒಂದೊಂದು ಲಾರಿಗೆ ಇಷ್ಟು ಫೈನ್ ಹಾಕುತ್ತೇವೆಂದು ಹೇಳಿದಿರಿ. ಯಾವುದೇ ತರಹದ ಕ್ರಮ ಆಗಿಲ್ಲ. ರಾಜ್ಯದ ಹಿತದೃಷ್ಟಿಯಿಂದ, ಬೊಕ್ಕಸದ ಹಿತದೃಷ್ಟಿಯಿಂದ ಕನಿಷ್ಠವೆಂದರೂ 300 ರಿಂದ 400 ಕೋಟಿ ರೂ. ತರುವುದಕ್ಕೆ ಸಾಧ್ಯವಿದೆ. ನಿರಂತರವಾಗಿ ಮರಳಿನ ಲೂಟಿ ಒಂದು ಕಡೆ, ಇನ್ನೊಂದು ಕಡೆ ನಮಗೆ ಕುಡಿಯುವುದಕ್ಕೆ ನೀರು ಇಲ್ಲದ ಹಾಗಾಗಿದೆ. ಎಲ್ಲೆಲ್ಲಿ ಮರಳು ಲೂಟಿ ಆಗುತ್ತಿದೆ ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಜನ ಫ್ಲೋರೈಡ್‌ನಿಂದ ತತ್ತರಿಸುತ್ತಿದ್ದಾರೆ. ನೀವು ಲೋಕೋಪಯೋಗಿ ಇಲಾಖೆಗೆ ಕೊಡಬೇಕೆಂದು ಹೇಳುತ್ತಿರುವುದು ನಾನು ಒಪ್ಪುತ್ತೇನೆ. ನೀವು ಏನೇ ನೀತಿ ತಂದರೂ 15 ದಿವಸಗಳಲ್ಲಿ ತರುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿ. ಈ ರೀತಿಯಾಗಿ ವರ್ಷಗಟ್ಟಲೆ ಹೇಳಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಈ ಮನೆಯಲ್ಲಿ ಭರವಸೆಯನ್ನು ಕೊಡುತ್ತಿದ್ದೇನೆ. ಮರಳು ಸಾಗಾಣಿಕೆ, ಇದೊಂದು ಮಾಫಿಯಾ ಆಗಿದೆ ಎಂದು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಾವು ಏನು ಮಾಡಬೇಕೆಂದಿದ್ದೇವೆ ಅದರ ಬಗ್ಗೆ ಪ್ರತಿಪಕ್ಷದ ಮುಖಂಡರುಗಳನ್ನು ಕರೆದು ಸಮಾಲೋಚನೆ ಮಾಡುತ್ತೇನೆ. ಬೇರೆ ರಾಜ್ಯಗಳಲ್ಲಿ ಸುಲಲಿತವಾಗಿ ಏನು ಮಾಡಿದ್ದಾರೆ ಅದೇ ಬಿಗಿ ಕ್ರಮವನ್ನು ತೆಗೆದುಕೊಂಡು

PWD ಇಲಾಖೆಗೆ ವಹಿಸಿ ನೇರ ಪರ್ಮಿಟ್ ಕೊಟ್ಟು ಈ ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಬೇಕೆಂದು ಚಿಂತನೆ ಆಗಿದೆ. ಆದಷ್ಟು ಬೇಗ ಒಂದು ತೀರ್ಮಾನಕ್ಕೆ ಬರುತ್ತೇನೆ. ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ನಿಮ್ಮನ್ನೂ ಕರೆದು ಪ್ರತಿಪಕ್ಷದ ನಾಯಕರನ್ನೂ ಕರೆದು ನಿಮ್ಮ ಸಲಹೆಯನ್ನೂ ಪಡೆದುಕೊಳ್ಳುತ್ತೇನೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಇದು ಕೇವಲ ಯಡಿಯೂರಪ್ಪ ಅಥವಾ ಒಬ್ಬ ಶಾಸಕನಿಗೆ ಸಂಬಂಧಪಟ್ಟ ವಿಷಯವಲ್ಲ. ಜನತೆಯ ಪ್ರಶ್ನೆ ಇದು. ಸಮಸ್ಯೆ ಎದುರಿಸುತ್ತಿದ್ದೇವೆ. ಇದಕ್ಕೆ ಪರಿಹಾರ ಹುಡುಕೋಣ. ಆದಷ್ಟು ಬೇಗ ನಿರ್ಧಾರ ಮಾಡಿ ಹೊಸ ನೀತಿಯನ್ನು ಜಾರಿಗೆ ತರೋಣ.

ರಾಜ್ಯದಲ್ಲಿ ವಸತಿ ರಹಿತ ಕುಟುಂಬಗಳ ಬಗ್ಗೆ

30 (59) ಶ್ರೀ ಖಾದರ್ ಯು. ಟಿ: ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಸತಿರಹಿತ ಕುಟುಂಬಗಳನ್ನು ಗುರುತಿಸಲಾಗಿದೆಯೇ (ಕಳೆದ 2 ವರ್ಷಗಳ ಜಿಲ್ಲಾವಾರು ವಿವರ ನೀಡುವುದು);

ಆ) ವಸತಿ ಇಲ್ಲದವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಇರುವ ಯೋಜನೆಗಳು ಯಾವುವು;

ಇ) ಈ ಪ್ರಸಕ್ತ ವರ್ಷ ರಾಜ್ಯದಲ್ಲಿ ಎಷ್ಟು ಮನೆಗಳ ನಿರ್ಮಾಣಕ್ಕೆ ಹಣ ಕಾಯ್ದಿರಿಸಿದೆ (ಯೋಜನಾವಾರು ವಿವರ ನೀಡುವುದು)

ಈ) ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):

ಅ) ಹೌದು. ಜಿಲ್ಲಾವಾರು ವಿವರಗಳನ್ನು ಅನುಬಂಧ "ಅ" ದಲ್ಲಿ ಲಗತ್ತಿಸಿದೆ.